# ಶ್ರೀರಾಮಕೃಷ್ಣ ವಚನವೇದದಿಂದ



## ಆತ್ಮಜ್ಞಾನ

ಯಾರಿಗೆ ಈ ಆತ್ಮಜ್ಞಾನ ದೊರೆತಿರುವುದೊ ಆತ ಜೀವನ್ಮುಕ್ತ. ಆತನಿಗೆ ಚೆನ್ನಾಗಿ ಗೊತ್ತಿದೆ, ಶರೀರ ಪ್ರತ್ಯೇಕ, ಆತ್ಮ ಪ್ರತ್ಯೇಕ ಅಂತ. ಭಗವಂತನ ದರ್ಶನವಾದ ಮೇಲೆ ದೇಹಾತ್ಮಬುದ್ಧಿ ಇರದು. ನೀರು ಇಂಗಿಹೋದ ತೆಂಗಿನಕಾಯಿಯಲ್ಲಿ ತಿರುಳು ಪ್ರತ್ಯೇಕವಾಗಿ ಕರಟ ಪ್ರತ್ಯೇಕವಾಗಿ ಇರುವಂತೆ ಇವೆರಡೂ ಪ್ರತ್ಯೇಕ ಪ್ರತ್ಯೇಕ. ಆತ್ಮ ದೇಹದೊಳಗೆ "ಗಿಟ ಗಿಟ" ಅಂತ ಅಲ್ಲಾಡುತ್ತಿರುವುದೊ ಏನೊ ಎಂಬಂತೆ ಕಾಣಬರುತ್ತದೆ. ವಿಷಯಬುದ್ಧಿ ಎಂಬ ನೀರು ಇಂಗಿ ಹೋಯಿತು ಎಂದರೆ ಆತ್ಮಜ್ಞಾನ ದೊರಕುತ್ತದೆ; ಆತ್ಮ ಪ್ರತ್ಯೇಕ ದೇಹ ಪ್ರತ್ಯೇಕ ಎಂಬ ಬೋಧೆಯಾಗುತ್ತದೆ. ಹಸಿಯ ಅಡಕೆ ಅಥವಾ ಹಸಿಯ ಬಾದಾಮಿ. ಒಳಗಿರೋ ಅಡಕೆಯನ್ನು ಅಥವಾ ಬಾದಾಮಿಯನ್ನು ಅವುಗಳ ಸಿಪ್ಪೆಯಿಂದ ಪ್ರತ್ಯೇಕಪಡಿಸಲಾಗುವುದಿಲ್ಲ; ಆದರೆ ಅವು ಹಣ್ಣಾದಾಗ ಅಡಕೆ ಮತ್ತು ಬಾದಾಮಿ ಪ್ರತ್ಯೇಕವಾಗಿ, ಅವುಗಳ ಸಿಪ್ಪೆ ಪ್ರತ್ಯೇಕವಾಗಿ ಆಗಿಬಿಡುತ್ತವೆ. ಹಣ್ಣಾದಾಗ ರಸ ಇಂಗಿ ಹೋಗಿಬಿಡುತ್ತದೆ. ಆತ್ಮಜ್ಞಾನ ದೊರೆತರೆ ವಿಷಯರಸ ಇಂಗಿ ಹೋಗಿಬಿಡುತ್ತದೆ.

ಎಲ್ಲಿಯವರೆಗೆ ಮನುಷ್ಯ ತನ್ನ ಮನಸ್ಸಿನ ಮೂಲಕ ವಿಚಾರದಲ್ಲಿ ತೊಡಗಿರುತ್ತಾನೊ, ಅಲ್ಲಿಯವರೆಗೆ ಆತ ಆತ್ಮಜ್ಞಾನ ಪಡೆಯಲಾರ. ಮನಸ್ಸಿನ ಮೂಲಕ ವಿಚಾರ ಮಾಡಲು ಹೊರಟರೆ ಜಗತ್ತಿನ ಎಲ್ಲೆಯನ್ನು ಬಿಟ್ಟು ಮುಂದುವರಿಯುವಹಾಗಿಲ್ಲ—ರೂಪ, ರಸ, ಗಂಧ, ಸ್ಪರ್ಶ, ಶಬ್ದ ಈ ಇಂದ್ರಿಯ ವಸ್ತುಗಳ ಎಲ್ಲೆಯನ್ನು ಬಿಟ್ಟು ಮುಂದುವರಿಯುವಹಾಗಿಲ್ಲ. ವಿಚಾರ ನಿಂತಮೇಲೇನೆ ಆತ್ಮಜ್ಞಾನ ದೊರೆಯಬೇಕಾದರೆ, ಈ ಮನಸ್ಸಿನ ಮೂಲಕ ಆತ್ಮಜ್ಞಾನವನ್ನು ಪಡೆಯಲಿಕ್ಕಾಗುವುದಿಲ್ಲ. ಆತ್ಮನ ಮೂಲಕ ಮಾತ್ರವೇ ಆತ್ಮಜ್ಞಾನ ಸಾಧ್ಯ. ಶುದ್ಧ-ಮನಸ್ಸು, ಶುದ್ಧ-ಬುದ್ಧಿ, ಶುದ್ಧ-ಆತ್ಮ—ಇವು ಮೂರೂ ಒಂದೇ.

ನಾವು ಯಾವುದಾದರೂ ಒಂದು ವಸ್ತುವನ್ನು ನೋಡಬೇಕಾದರೆ ನಮಗೆ ಎಷ್ಟೊಂದು ವಸ್ತುಗಳ ಆವಶ್ಯಕತೆ ಇದೆ ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿ. ನಮಗೆ ಕಣ್ಣು ಬೇಕು; ಬೆಳಕು ಬೇಕು; ಮನಸ್ಸು ಬೇಕು; ಈ ಮೂರರಲ್ಲಿ ಯಾವುದೊಂದು ಇಲ್ಲದಿದ್ದರೂ ವಸ್ತುವನ್ನು ನೋಡಲಿಕ್ಕಾಗುವುದಿಲ್ಲ. ಈ ಮನಸ್ಸೆಂಬುದು ಎಲ್ಲಿಯವರೆಗೆ ಕೆಲಸ ಮಾಡಿಕೊಂಡು ಮುಂದುವರಿಯುತ್ತಿರುವುದೊ, ಅಲ್ಲಿಯವರೆಗೆ ಈ ಜಗತ್ತೆಂಬುದು ಇಲ್ಲ, ನಾನು ಎಂಬುದು ಇಲ್ಲ ಅಂತ ಹೇಳಲಾದೀತೆ? ಮನಸ್ಸು ನಾಶವಾಗಿಹೋದರೆ, ಸಂಕಲ್ಪ, ವಿಕಲ್ಪ ನಿಂತುಹೋದರೆ ಆತ್ಮಜ್ಞಾನ ದೊರೆಯುತ್ತದೆ.

ಯಾರಿಗೇ ಆಗಲಿ ಒಮ್ಮೆ ಆತ್ಮಜ್ಞಾನ ಆಯಿತು ಅಂದರೆ ಒಮ್ಮೆ ಭಗವಂತನ ದರ್ಶನ ದೊರೆತುಬಿಟ್ಟಿತು ಅಂದರೆ, ಕೆಲಸಕ್ಕೆ ಬಾರದವುಗಳ ವಿಷಯವಾಗಿ ತಿಳಿದುಕೊಳ್ಳಲು ಇಚ್ಛೆಯೆ ಬರುವುದಿಲ್ಲ. ವಿಷಮಶೀತಜ್ವರದಿಂದ ಸನ್ನಿ ಮುಚ್ಚಿಕೊಂಡಿರುವ ರೋಗಿ ಹೇಳುತ್ತಾನೆ, "ನಾನು ಐದು ಸೇರು ಅಕ್ಕಿಯ ಅನ್ನ ಊಟ ಮಾಡಿಬಿಡುತ್ತೇನೆ! ಒಂದು ಇಡೀ ಕೆರೆ ನೀರನ್ನೇ ಕುಡಿದು ಬಿಡುತ್ತೇನೆ!" ಅಂತ. ಆಗ ಡಾಕ್ಟರ್ ಹೇಳುತ್ತಾನೆ, "ಹಾಗೇನು? ಆಗಲಿ, ಬಹಳ ಒಳ್ಳೆಯದು" ಅಂತ. ಹೀಗೆಂದು ಹೇಳಿ ಹುಕ್ಕ ಸೇದುತ್ತ ಹರಟೆ ಹೊಡೆಯುತ್ತಿರುತ್ತಾನೆ. ಆದರೆ ಯಾವಾಗ ಸನ್ನಿ ಇಳಿದುಹೋಗಿಬಿಡುವುದೋ ಆಗ ರೋಗಿಯ ಕಷ್ಟ ಸುಖಗಳಿಗೆಲ್ಲ ಕಿವಿಗೊಡಬೇಕಾಗುತ್ತದೆ.

ಆತ್ಮಜ್ಞಾನ ದೊರೆತ ನಂತರ, ನಿತ್ಯಶುದ್ಧಬೋಧಸ್ವರೂಪ ಮಾತ್ರ. ಅದನ್ನು ನಾನು ವಿವರಿಸಿ ತಿಳಿಸುವ ಬಗೆ ಹೇಗೆ? ಯಾರಾದರೂ ನಿನ್ನನ್ನು ಕೇಳಿದರೆ, "ತುಪ್ಪದ ರುಚಿ ಎಂಥದು?" ಅಂತ. ನೀನು ಅದನ್ನು ಆತನಿಗೆ ವಿಷದಪಡಿಸುವ ಬಗೆ ಹೇಗೆ? ಅತಿ ಹೆಚ್ಚೆಂದರೆ ನೀನು ಆತನಿಗೆ ಹೇಳಬಹುದು, "ತುಪ್ಪದ ರುಚಿಯೇ? ತುಪ್ಪದ ಹಾಗೆ!" ಅಂತ. ಒಬ್ಬ ಚಿಕ್ಕ ಹುಡುಗಿ ತನ್ನ ಗೆಳತಿಯನ್ನು ಕೇಳಿದಳು: "ನಿಮ್ಮ ಮನೆಗೆ ನಿಮ್ಮ ಪತಿ ಬಂದಿದ್ದಾನೆ. ಒಳ್ಳೆಯದು ಗೆಳತಿ, ನೀನು ಏನೇನು ಸುಖವನ್ನು ಆತನೊಡನೆ ಅನುಭವಿಸುತ್ತೀಯೆ ತಿಳಿಸು ನೋಡೋಣ?" ಆ ಗೆಳತಿ ಹೇಳಿದಳು: "ನನ್ನರಗಿಣಿ, ನಿನಗೂ ಪತಿ ದೊರಕಿದನಂತರ ಎಲ್ಲ ನಿನಗೇ ಗೊತ್ತಾಗುತ್ತದೆ. ಈಗ ನಾನು ನಿನಗೆ ವಿವರಿಸಿ ತಿಳಿಸುವ ಬಗೆ ಹೇಗೆ?"

ಅದ್ವೈತಜ್ಞಾನ ದೊರೆತನಂತರ ಆತ್ಮ ಜಾಗ್ರತಿಯುಂಟಾಗಿ ಬಿಡುತ್ತದೆ. ಆಗ ಸರ್ವಭೂತಗಳಲ್ಲೂ ಭಗವಂತ ಚೈತನ್ಯರೂಪದಿಂದಿರುವುದು ಕಾಣಬರುತ್ತದೆ. ಈ ಅನುಭವ ದೊರೆತ ನಂತರ ಆನಂದ ದೊರೆಯುತ್ತದೆ. ಮೊದಲು ಅದ್ವೈತ ಜ್ಞಾನ, ಬಳಿಕ ಆತ್ಮಜಾಗ್ರತಿ, ಅನಂತರ ನಿತ್ಯಾನಂದ.

ಸತ್ಯವೇನೆಂದರೆ, ಎಲ್ಲಿಯವರೆಗೆ ಪ್ರಾಪಂಚಿಕ ವಸ್ತುಗಳಲ್ಲಿ ಭೋಗಾಸಕ್ತಿ ಇರುವುದೋ ಅಲ್ಲಿಯವರೆಗೆ ಆತ್ಮನನ್ನು ತಿಳಿಯಬೇಕೆಂದಾಗಲೀ, ಆತ್ಮನ ದರ್ಶನ ಪಡೆಯಬೇಕೆಂದಾಗಲೀ ಪ್ರಾಣ ವ್ಯಾಕುಲ ಪಡುವುದಿಲ್ಲ. ಮಗು ಆಟದಲ್ಲಿ ತೊಡಗಿರುವಾಗ ಎಲ್ಲವನ್ನೂ ಮರೆತುಬಿಡುತ್ತದೆ. ಅದನ್ನು ಆಟದಿಂದ ಬಿಡಿಸಲು ಸಿಹಿತಿಂಡಿ ಕೊಟ್ಟರೂ ಅದನ್ನು ಎಲ್ಲೋ ಕಿಂಚಿತ್ ತಿಂದುಬಿಟ್ಟು ಮತ್ತೆ ಆಟದಲ್ಲಿ ತೊಡಗುತ್ತದೆ. ಯಾವಾಗ ಅದಕ್ಕೆ ಆಟವೂ ರುಚಿಸದೋ ಸಿಹಿತಿಂಡಿಯೂ ರುಚಿಸದೋ, ಆಗ ಅದು ಹೇಳುತ್ತದೆ: "ನಾನು ತಾಯಿಯ ಹತ್ತಿರಕ್ಕೆ ಹೋಗಬೇಕು" ಎಂಬುದಾಗಿ. ಆಗ ಅದಕ್ಕೆ ಸಿಹಿತಿಂಡಿ ಬೇಕಾಗುವುದಿಲ್ಲ. ಯಾರನ್ನು ಆ ಮಗು ಎಂದೂ ನೋಡಿಲ್ಲವೋ ಕಂಡಿಲ್ಲವೋ ಆತ ಬಂದು ಹೇಳಿದರೂ, "ಬಾ ನನ್ನೊಡನೆ, ನಿನ್ನ ತಾಯಿಯ ಹತ್ತಿರ ಕರೆದುಕೊಂಡು ಹೋಗುತ್ತೇನೆ" ಎಂಬುದಾಗಿ, ಒಡನೇ ಅದು ಆತನನ್ನು ಹಿಂಬಾಲಿಸುತ್ತದೆ. ವ್ಯಕ್ತಿ ಯಾರು ಬೇಕಾದರೂ ಆಗಿರಲಿ, ಯಾರು ಅದನ್ನು ತನ್ನ ತಾಯಿಯ ಹತ್ತಿರಕ್ಕೆ ಕರೆದುಕೊಂಡು ಹೋಗಿ ಬಿಡುತ್ತಾನೊ, ಆತನೊಡನೆ ಅದು ಹೊರಟುಹೋಗುತ್ತದೆ. ಪ್ರಾಪಂಚಿಕ ವಸ್ತುಗಳನ್ನು ಭೋಗಿಸಿ ತೃಪ್ತಿ ದೊರೆಯಿತು ಎಂದರೆ, ಪ್ರಾಣ ಆತ್ಮಜ್ಞಾನಕ್ಕಾಗಿ ವ್ಯಾಕುಲ ಪಡುತ್ತದೆ.